# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 448(501)
ಉತ್ತರಿಸಬೇಕಾದ ದಿನಾಂಕ : 11.12.2025
ಸದಸ್ಯರ ಹೆಸರು : ಶ್ರೀ ಐವನ್ ಡಿ ಸೋಜಾ (ವಿಧಾನ ಸಭಾ ಕ್ಷೇತ್ರ)
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಂಬಳ ಕ್ರೀಡೆಗೆ ಪ್ರೋತ್ಸಾಹ ನೀಡುವ ಬಗ್ಗೆ ಸರ್ಕಾರದಿಂದ ಕೈಗೊಂಡಿರುವ ಕ್ರಮವೇನು; | ಕಂಬಳ ಕ್ರೀಡೆಗೆ ಪ್ರೋತ್ಸಾಹ ನೀಡುವ ಬಗ್ಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಕೈಗೊಂಡ ಕ್ರಮಗಳ ವಿವರಗಳು ಕೆಳಕಂಡಂತಿವೆ:<br>1. ಕರ್ನಾಟಕ ರಾಜ್ಯ ಕಂಬಳ ಅಸೋಸಿಯೇಷನ್ (ರಿ), ಸಂಖ್ಯೆ 10, 1-39ಎ, ಜೈ ಭಾರತ್ ಮಿಲ್ ಬಿಲ್ಡಿಂಗ್, ಚಿತ್ತರಂಜನ್ ವೃತ್ತ, ಉಡುಪಿ ಜಿಲ್ಲೆ 576101 ಇವರಿಗೆ ಕಂಬಳ ಕ್ರೀಡೆಯ ರಾಜ್ಯ ಕ್ರೀಡಾ ಸಂಸ್ಥೆಯಾಗಿ ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಮಾನ್ಯತೆ ನೀಡಲಾಗಿದೆ.<br>2. ಕಂಬಳ ಕ್ರೀಡೆಗಳ ಆಯೋಜನೆಗೆ ಅನುದಾನ ಒದಗಿಸಲು ವಿಶೇಷ ಅನುದಾನ ಸಂಹಿತೆ ನಿಯಮಗಳನ್ನು ರೂಪಿಸಲಾಗುತ್ತಿದೆ.<br>3. 2025-26ನೇ ಸಾಲಿನಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕ್ರಿಯಾ ಯೋಜನೆಯಲ್ಲಿ ಕಂಬಳ ಕ್ರೀಡೆಗೆ ಅನುದಾನ ಒದಗಿಸಲು ರೂ.40.00ಲಕ್ಷ ಹಂಚಿಕೆ ಮಾಡಲಾಗಿದೆ.<br>4. ಪ್ರತೀ ವರ್ಷ ಕಂಬಳವು ಒಳಗೊಂಡಂತೆ ಗ್ರಾಮೀಣ ಹಾಗೂ ಪಾರಂಪರಿಕ ಕ್ರೀಡೆಗಳಲ್ಲಿ ಅತ್ಯುನ್ನತ ಸಾಧನೆ ಮಾಡುವ ಕ್ರೀಡಾಪಟುಗಳಿಗೆ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ ನೀಡಲಾಗುತ್ತಿದೆ.<br>5. ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದ್ರೆಯ 'ವೀರ ರಾಣಿ ಅಬ್ಬಕ್ಕ ಸಂಸ್ಕೃತಿ ಗ್ರಾಮ'ದಲ್ಲಿ 10 ಎಕರೆ ಜಾಗದಲ್ಲಿ 'ಕೋಟಿ-ಚೆನ್ನಯ್ಯ' ಹೆಸರಿನ ಜೋಡುಕರೆಯನ್ನು ನಿರ್ಮಾಣ ಮಾಡಲಾಗಿದ್ದು, ವೀಕ್ಷಕರ ಗ್ಯಾಲರಿ ಮತ್ತಿತರ ಅಗತ್ಯ ಮೂಲಸೌಕರ್ಯಗಳೊಂದಿಗೆ ಕಂಬಳ ಕ್ರೀಡಾಂಗಣವನ್ನು ನಿರ್ಮಿಸಲಾಗಿದೆ. ಮತ್ತು ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಮಿಯ್ಯಾರಿನಲ್ಲಿ 5 ಎಕರೆ ನಿವೇಶನದಲ್ಲಿ 'ಲವ-ಕುಶ' ಹೆಸರಿನ ಕಂಬಳ ಕ್ರೀಡಾಂಗಣವನ್ನು ನಿರ್ಮಿಸಲಾಗಿದೆ. |
| ಆ | ಕಂಬಳ ಕ್ರೀಡೆಯನ್ನು ಪ್ರೋತ್ಸಾಹಿಸಲು ಅಕಾಡೆಮಿಯನ್ನು ರಚಿಸಿ, ಕಂಬಳ ಕ್ರೀಡೆಯಲ್ಲಿ ಭಾಗವಹಿಸುವ ಕಂಬಳದ ಮಾಲೀಕರು ಹಾಗೂ ಸಂಬಂಧಪಟ್ಟವರಿಗೆ ತರಬೇತಿಗಳನ್ನು ನೀಡಲು ಸರ್ಕಾರದ ಮುಂದೆ ಯೋಜನೆ ಇದೆಯೇ (ವಿವರ ನೀಡುವುದು) | ಇಲ್ಲ. |

| | | |
|---|---|---|
| ಇ | ಈ ಕ್ರೀಡೆಯು ದೇಶ ವಿದೇಶಗಳಲ್ಲಿ ಬಹಳಷ್ಟು ಪ್ರಶಂಸೆಗೆ ಭಾಜನವಾಗಿದ್ದು, ರಾಜ್ಯದಲ್ಲಿ ಎಲ್ಲಾ ಭಾಗದಲ್ಲಿ ವಿಸ್ತರಿಸುವ ಯೋಚನೆ ಇದೆಯೇ; (ವಿವರ ನೀಡುವುದು); | ಇಲ್ಲ. ಕಂಬಳ ಕ್ರೀಡೆಯನ್ನು ರಾಜ್ಯದ ಎಲ್ಲಾ ಭಾಗಗಳಿಗೆ ವಿಸ್ತರಿಸುವ ಯೋಜನೆ ಪ್ರಸ್ತುತ ಸರ್ಕಾರದ ಮುಂದಿರುವುದಿಲ್ಲ.<br><br>ಕರ್ನಾಟಕ ರಾಜ್ಯ ಕಂಬಳ ಅಸೋಸಿಯೇಷನ್ (ರಿ), ಸಂಖ್ಯೆ 10, 1-39ಎ, ಜೈ ಭಾರತ್ ಮಿಲ್ ಬಿಲ್ಡಿಂಗ್, ಚಿತ್ತರಂಜನ್ ವೃತ್ತ, ಉಡುಪಿ ಜಿಲ್ಲೆ 576101 ಈ ಸಂಸ್ಥೆಗೆ ರಾಜ್ಯ ಕ್ರೀಡಾ ಸಂಸ್ಥೆಯಾಗಿ ಮಾನ್ಯತೆ ನೀಡಲಾಗಿದ್ದು, ಕಂಬಳ ಕ್ರೀಡೆಯನ್ನು ರಾಜ್ಯದ ಇತರ ಭಾಗಗಳಿಗೆ ವಿಸ್ತರಿಸುವ ಬಗ್ಗೆ ರಾಜ್ಯ ಕ್ರೀಡಾ ಸಂಸ್ಥೆಯು ಯೋಜನೆ ರೂಪಿಸಬೇಕಾಗಿರುತ್ತದೆ. |
| ಈ | ಪ್ರಸ್ತುತ ಕಂಬಳ ಕ್ರೀಡೆಗೆ ನೀಡುವ ಸಹಾಯಧನವನ್ನು ಯಾವ ಅರ್ಹತೆ ಮತ್ತು ಮಾನದಂಡದ ಮೇಲೆ ನೀಡಲಾಗುತ್ತಿದೆ; (ವಿವರ ನೀಡುವುದು) | 2025-26ನೇ ಸಾಲಿನಲ್ಲಿ ಕಂಬಳ ಕ್ರೀಡೆಗೆ ಸಂಬಂಧಿಸಿದಂತೆ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳಲ್ಲಿನ ಕಂಬಳ ಆಯೋಜಕ ಸಂಸ್ಥೆಗಳನ್ನು ಗುರುತಿಸಿ, ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಅನುದಾನ ಮಂಜೂರು ಮಾಡಲು ಕ್ರಮ ವಹಿಸಲಾಗುತ್ತಿದೆ. |
| ಉ | ಕಂಬಳ ಕ್ರೀಡೆಯನ್ನು ಸರ್ಕಾರದ ವತಿಯಿಂದ ನಡೆಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; (ವಿವರ ನೀಡುವುದು) | ಕಂಬಳ ಕ್ರೀಡೆಯನ್ನು ಸರ್ಕಾರದ ವತಿಯಿಂದ ಆಯೋಜಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |
| ಊ | 2023-24 ಮತ್ತು 2024-25ರಲ್ಲಿ ಕಂಬಳ ಕ್ರೀಡೆಗೆ ಒದಗಿಸಿದ ಅನುದಾನ ಎಷ್ಟು? (ವಿವರ ನೀಡುವುದು) | 2023-24ನೇ ಸಾಲಿನಲ್ಲಿ, ದಿನಾಂಕ:25-11-2023 ರಿಂದ 26-11-2023 ರವರೆಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ 'ಬೆಂಗಳೂರು ಕಂಬಳ'ಕ್ಕೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ರೂ.50.00ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.<br><br>2024-25ನೇ ಸಾಲಿನಲ್ಲಿ ಕಂಬಳ ಕ್ರೀಡೆಗೆ ಯಾವುದೇ ಅನುದಾನ ಒದಗಿಸಿರುವುದಿಲ್ಲ. |

**ವೈಎಸ್‌ಡಿ-ಸಿಡಿಎನ್/515/2025**

**(ಸಿದ್ದರಾಮಯ್ಯ)**

ಮುಖ್ಯಮಂತ್ರಿ